**ದಿನಾಂಕಃ 15.11.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**<u>ಪಾಟೀ ಸವಾಲುಃಃ ವಾದಿಗಳ ಪರ ವಕೀಲರಿಂದಃ</u>**

ನನ್ನ ವಿದ್ಯಾರ್ಹತೆ ಬಿ.ಎ ಪದವಿ. ನನ್ನ ಪ್ರತಿವಾದ ಪತ್ರ ತಯಾರಿಸಲು ನಾನೇ ಮಾಹಿತಿ ನೀಡಿದ್ದೆನು. ದಾವಾ ಪತ್ರದಲ್ಲಿ ಏನು ಬರೆದಿದೆ ಎಂದು ನಾನು ಓದಿ ತಿಳಿದುಕೊಂಡಿದ್ದೇನೆ. ನಿಪಿ-2 ಎಂದು ಗುರುತು ಆಗಿರುವ ಒಟ್ಟು 4 ಫೋಟೋಗಳು ದಾವಾ ಸ್ವತ್ತುಗಳ ಫೋಟೋಗಳು ಎಂದರೆ ಸರಿ. ಈ ದಾವೆಯಲ್ಲಿ ಎರಡು ದಾವಾ ಸ್ವತ್ತುಗಳು ಇವೆ ಎಂದರೆ ಸರಿ. ದಾವಾ ಸ್ವತ್ತುಗಳ ಸಂ.27 ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳ ಅಳತೆ ತಲಾ ಪೂರ್ವ ಪಶ್ಚಿಮ 40 ಅಡಿಗಳು ಹಾಗೂ ಉತ್ತರ ದಕ್ಷಿಣ 30 ಅಡಿಗಳು ಎಂದರೆ ಸರಿ. ನಿವೇಶನ ಸಂ.27 ರ ಚೆಕ್ಕುಬಂದಿ ಹೇಳಲಾಗುತ್ತದೆಯೇ ಎಂದರೆ ಸಾಕ್ಷಿ ನುಡಿಯುತ್ತಾರೆ ನಿವೇಶನ ಸಂ.27 ರ ಚೆಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ನಿವೇಶನ ಸಂ.16 ಇರಬಹುದು, ಉತ್ತರಕ್ಕೆ ನಿವೇಶನ ಸಂ.28 ಹಾಗೂ ದಕ್ಷಿಣಕ್ಕೆ ನಿವೇಶನ ಸಂ.26. ದಾವಾ ಐಟಂ ಸಂ.1 ರ ಸ್ವತ್ತಿನ ಚೆಕ್ಕುಬಂದಿ ಪೂರ್ವಕ್ಕೆ ನಿವೇಶನ ಸಂ.33, ಪಶ್ಚಿಮಕ್ಕೆ 25 ಅಡಿ ರಸ್ತೆ, ಉತ್ತರಕ್ಕೆ ರುದ್ರೇಶ ರವರ ಸ್ವತ್ತು ಹಾಗೂ ದಕ್ಷಿಣಕ್ಕೆ ರಸ್ತೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೆ ಎರಡೂ ಕಡೆ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ನುಡಿಯುತ್ತಾರೆ ನಿವೇಶನ ಸಂ.27 ಕ್ಕೆ ಒಂದೇ ಕಡೆ ರಸ್ತೆ ಬರುತ್ತದೆ. ವಾದಿಗಳು ದಾವೆ ಸಲ್ಲಿಸಿರುವ ದಾವಾ ಸ್ವತ್ತು ನಿವೇಶನ ಸಂ.27 ಎಂದರೆ ಸರಿ. ನಿಪಿ-2 ರ ಫೋಟೋಗಳಲ್ಲಿ ಕಾಣುವ ದಾವಾ ಸ್ವತ್ತುಗಳಿಗೆ ವಾದಿಗಳು ಮಾಲೀಕರು ಎಂದರೆ ಸಾಕ್ಷಿ ನುಡಿಯುತ್ತಾರೆ ಇಲ್ಲ ನಾನೇ ಮಾಲೀಕ. ವಾದಿಗಳು ನಿವೇಶನ ಸಂ.27 ರ ಮಾಲೀಕರು ಎಂದರೆ ಸಾಕ್ಷಿ ನುಡಿಯುತ್ತಾರೆ ಇರಬಹುದು ನನಗೆ ಗೊತ್ತಿಲ್ಲ.

ವಾದಿಗಳು ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲಾತಿಗಳನ್ನು ನೀವು ಮೊದಲ ಬಾರಿಗೆ ಯಾವಾಗ ನೋಡಿದ್ದೀರಿ ಎಂದರೆ ಸಾಕ್ಷಿ ನುಡಿಯುತ್ತಾರೆ ನ್ಯಾಯಾಲಯದಲ್ಲಿ ನೋಡಿದ್ದೇನೆ. ವಾದಿಗಳ ಹೆಸರಿಗೆ ಆಗಿರುವ ಕ್ರಯ ಪತ್ರ ಹಾಗೂ ರಿಲೀಸ್ ಡೀಡ್ ದಾಖಲಾತಿಗಳನ್ನು ನಾನು ಎಂದೂ ಸಹಾ ಎಲ್ಲೂ ಸಹಾ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿ ನುಡಿಯುತ್ತಾರೆ ಅದು ನನಗೆ ಸಂಬಂಧಪಡದ ದಾಖಲೆಗಳು ಆಗಿರುತ್ತದೆ.

ದಾವಾ 1 ನೇ ಐಟಂ ಸ್ವತ್ತಿಗೆ ಸಂಬಂಧಿಸಿದಂತೆ ದಿನಾಂಕ 28.11.2013 ರಂದು ಗೌರಮ್ಮ ರವರ ಹೆಸರಿಗೆ ಹಕ್ಕು ಬಿಡುಗಡೆ ಪತ್ರವಾಗಿರುತ್ತದೆ ಎಂದರೆ ಸರಿ. ದಿನಾಂಕ 26.07.2004 ರಂದು ದಾವಾ 2 ನೇ ಐಟಂ ಸ್ವತ್ತಿಗೆ ಸಂಬಂಧಿಸಿದಂತೆ 2 ನೇ ವಾದಿಯ ಹೆಸರಿಗೆ ಕ್ರಯ ಪತ್ರವಾಗಿದೆ ಎಂದರೆ ಸಾಕ್ಷಿ ನುಡಿಯುತ್ತಾರೆ ದಾಖಲೆಗಳ ಪ್ರಕಾರ ಆಗಿರುತ್ತದೆ. ದಿನಾಂಕ 28.11.2013 ರಂದು ಗೌರಮ್ಮ ರವರ ಹೆಸರಿಗೆ ಆಗಿದ್ದ ಹಕ್ಕು ಬಿಡುಗಡೆ ಪತ್ರದ ಪ್ರಕಾರ ದಾವಾ 1 ನೇ ಐಟಂ ಸ್ವತ್ತಿಗೆ ಅವರೇ ಮಾಲೀಕರು ಎಂದರೆ ಸಾಕ್ಷಿ ನುಡಿಯುತ್ತಾರೆ ನಿವೇಶನ ಸಂ.27 ರ ಸ್ವತ್ತಿಗೆ ಅವರು ಮಾಲೀಕರಾಗಿರಬಹುದು, ಬೇರೆಯವರು ಸಹಾ ನಿವೇಶನ ಸಂ.27 ರ ಮಾಲೀಕರು ಇರುತ್ತಾರೆ. ಯಾವ ದಾಖಲೆಯನ್ನು ನೋಡಿ ನಿವೇಶನ ಸಂ.27 ರ ಮಾಲೀಕರು ಬೇರೆಯವರು ಸಹಾ ಇದ್ದಾರೆ ಎಂದು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ನುಡಿಯುತ್ತಾರೆ ನಾನು ಆ ಬಗ್ಗೆ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿರುವ ನಿಡಿ-17 ರ ದಾಖಲೆಯ ಪ್ರಕಾರ ಆ ರೀತಿ ಹೇಳುತ್ತಿದ್ದೇನೆ. ನಿಡಿ-17 ರ ದಾಖಲೆಯನ್ನು ನಾನು ಓದಿರುತ್ತೇನೆ. ನಿಡಿ-17 ರಲ್ಲಿ ನಿವೇಶನ ಸಂ.27 ಖಾಲಿ ನಿವೇಶನ ಎಂದು ನಮೂದು ಇದೆ. ಈ ದಾವೆಯಲ್ಲಿರುವ ದಾವಾ ಸ್ವತ್ತು ನಿವೇಶನ ಸಂ.27 ಖಾಲಿ ಸ್ವತ್ತು ಎಂದರೆ ಸಾಕ್ಷಿ ನುಡಿಯುತ್ತಾರೆ ಅದರಲ್ಲಿ ಒಂದು ಶೀಟ್

ಮನೆ ಇದೆ. ನಿಪಿ-2 ರಲ್ಲಿ ಹಾಜರುಪಡಿಸಿರುವ ಫೋಟೋಗಳಲ್ಲಿ ಶೀಟ್ ಮನೆ ಕಾಣಿಸುತ್ತಿದ್ದೆಯೇ ಎಂದರೆ ಸಾಕ್ಷಿ ನುಡಿಯುತ್ತಾರೆ ಅದು ನನ್ನ ಸ್ವತ್ತಿನ ಫೋಟೋಗಳು, 27 ರ ನಿವೇಶನದಲ್ಲಿ ಶೀಟ್ ಮನೆ ಇದೆ. ನಿಡಿ-17 ರ ಅನುಸೂಚಿಯಲ್ಲಿ ಮನೆ ಎಂದು ನಮೂದು ಇದ್ದು ಶೀಟ್ ಮನೆ ಎಂದು ನಮೂದು ಇಲ್ಲ ಎಂದರೆ ಸರಿ. ಕೃಷ್ಣಪ್ಪ ಮತ್ತು ಗೋಪಾಲಸ್ವಾಮಿರೆಡ್ಡಿ ರವರಿಂದ ಜಿಪಿಎ ಮೂಲಕ ಅನುಸೂಯಮ್ಮ ರವರಿಗೆ ಆಗಿರುವ ಕ್ರಯ ಪತ್ರ ನಿಡಿ-17 ರ ದಾಖಲೆ. ಸದರಿ ನಿಡಿ-17 ರ ದಾಖಲೆಯನ್ನು ನಾನೇ ಪಡೆದುಕೊಂಡಿರುತ್ತೇನೆ. ನಿಡಿ-17 ರ ದಾಖಲೆಯು ದೊಡ್ಡಯ್ಯ ರವರಿಗೆ ಆಗಿರುವ ಕ್ರಯ ಪತ್ರ ಎಂದರೆ ಸಾಕ್ಷಿ ನುಡಿಯುತ್ತಾರೆ ಜಿಪಿಎ ಪಡೆದುಕೊಂಡಿದ್ದ ಅನುಸೂಯಮ್ಮ ರವರಿಂದ ದೊಡ್ಡಯ್ಯ ರವರಿಗೆ ಆಗಿರುವ ಕ್ರಯ ಪತ್ರ. ನಿಡಿ-17 ರ ಕ್ರಯ ಪತ್ರದಲ್ಲಿನ ಸ್ವತ್ತಿಗೂ ದಾವಾ ಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿ. ದಿನಾಂಕ 26.07.2004 ರ ಕ್ರಯ ಪತ್ರದ ಪ್ರಕಾರ ದಾವಾ 2 ನೇ ಐಟಂ ಸ್ವತ್ತಿಗೆ 2 ನೇ ವಾದಿಯು ಮಾಲೀಕರು ಎಂದರೆ ಸರಿಯಲ್ಲ.

**ನ್ಯಾಯಾಲಯದ ಸಮಯ ಮುಗಿದ ಕಾರಣ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ )

ಓ.ಹೇ.ಕೇ. ಸರಿ.ಇದೆ.

**(ವೇದ ಮೂರ್ತಿ ಬಿ.ಎಸ್)**
31 ನೇ ಅಪರ ನಗರ ಸಿವಿಲ್ ಮತ್ತು
ಸತ್ರ ನ್ಯಾಯಾಧೀಶರು, ಬೆಂಗಳೂರು ನಗರ.